





**(ಅವತೀರ್ಣ - ಮಕ್ಕಾದಲ್ಲಿ)**

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ ○

1. ಅಲಿಫ್ ಲಾಮ್ಮೀಮ್ ರಾ. ಇವು ದೇವಗ್ರಂಥದ ಸೂಕ್ತಗಳು. ನಿಮ್ಮ ಪ್ರಭುವಿನ ಕಡೆಯಿಂದ ನಿಮಗೆ ಅವತೀರ್ಣಗೊಳಿಸಲ್ಪಟ್ಟುದೆಲ್ಲವೂ ಪರಮ ಸತ್ಯ. ಆದರೆ, (ನಿಮ್ಮ ಜನಾಂಗದ) ಹೆಚ್ಚಿನವರು ವಿಶ್ವಾಸವಿರಿಸುತ್ತಿಲ್ಲ.

الٓمّٓرٰ ۚ تِلْكَ اٰيٰتُ الْكِتٰبِ ؕ وَالَّذِىْٓ
اُنْزِلَ اِلَيْكَ مِنْ رَّبِّكَ الْحَقُّ وَلٰكِنَّ
اَكْثَرَ النَّاسِ لَا يُؤْمِنُوْنَ ۝١

2. ಆಕಾಶಗಳನ್ನೂ ನಿಮಗೆ ತೋರುವಂತಹ ಆಧಾರಗಳೇನೂ ಇಲ್ಲದೆಯೇ ನಿಲ್ಲಿಸಿದವನು[1] ಅಲ್ಲಾಹನೇ ಆಗಿರುತ್ತಾನೆ. ಅನಂತರ ಅವನು ವಿಶ್ವಸಿಂಹಾಸನಾರೂಢನಾದನು ಮತ್ತು ಅವನು ಸೂರ್ಯನನ್ನೂ ಚಂದ್ರನನ್ನೂ ಒಂದು ನಿಯಮಕ್ಕೊಳಪಡಿಸಿದನು. ಈ ಸಂಪೂರ್ಣ ವ್ಯವಸ್ಥೆಯ ಪ್ರತಿಯೊಂದು ವಸ್ತುವೂ ಒಂದು ನಿರ್ದಿಷ್ಟ ಕಾಲದ ವರೆಗೆ ನಡೆಯುತ್ತಿರುತ್ತದೆ. ಇವೆಲ್ಲ ಕಾರ್ಯಗಳನ್ನು ಅವನೇ ನಿಯಂತ್ರಿಸುತ್ತಿದ್ದಾನೆ. ನೀವು ನಿಮ್ಮ ಪ್ರಭುವನ್ನು ಭೇಟಿ ಯಾಗಲಿರುವ ಬಗ್ಗೆ ದೃಢ ನಂಬಿಕೆ ತಾಳಲಿಕ್ಕಾಗಿ ಅವನು ದೃಷ್ಟಾಂತಗಳನ್ನು ಸುಸ್ಪಷ್ಟವಾಗಿ ವಿವರಿಸುತ್ತಾನೆ.[2]

اَللّٰهُ الَّذِىْ رَفَعَ السَّمٰوٰتِ بِغَيْرِ عَمَدٍ
تَرَوْنَهَا ثُمَّ اسْتَوٰى عَلَى الْعَرْشِ وَسَخَّرَ
الشَّمْسَ وَالْقَمَرَ ؕ كُلٌّ يَّجْرِىْ لِاَجَلٍ
مُّسَمًّى ؕ يُدَبِّرُ الْاَمْرَ يُفَصِّلُ الْاٰيٰتِ
لَعَلَّكُمْ بِلِقَآءِ رَبِّكُمْ تُوْقِنُوْنَ ۝٢

---

1. ಬೇರೆ ಮಾತುಗಳಲ್ಲಿ ಹೇಳುವುದಾದರೆ ಆಕಾಶಗಳನ್ನು ಅಗೋಚರವಾದ ಮತ್ತು ಅನುಭವಕ್ಕೆ ಬಾರದ ಆಧಾರಗಳ ಮೇಲೆ ನಿಲ್ಲಿಸಿದನು. ಬಾಹ್ಯ ನೋಟಕ್ಕೆ ವಿಶಾಲವಾದ ಅಂತರಿಕ್ಷದಲ್ಲಿರುವ ಅಗಣಿತ ಗಗನ ಕಾಯಗಳನ್ನು ಹಿಡಿದಿಟ್ಟಿರುವಂತಹ ಯಾವ ವಸ್ತುವೂ ಕಂಡು ಬರುವುದಿಲ್ಲ. ಆದರೆ ಅಗೋಚರವಾದ ಶಕ್ತಿಯೊಂದು ಪ್ರತಿಯೊಂದನ್ನೂ ಅದರ ಸ್ಥಾನದಲ್ಲಿ ತಡೆದು ನಿಲ್ಲಿಸಿದೆ ಮತ್ತು ಈ ಭವ್ಯ ಕಾಯಗಳು ಭೂಮಿಯ ಮೇಲೆ ಅಥವಾ ಒಂದು ಇನ್ನೊಂದರ ಮೇಲೆ ಬೀಳದಂತೆ ತಡೆಯುತ್ತಿದೆ.
2. ಅರ್ಥಾತ್- ಅಲ್ಲಾಹನ ಪ್ರವಾದಿಯು ಯಾವ ವಾಸ್ತವಿಕತೆಗಳ ಸುದ್ದಿ ಮುಟ್ಟಿಸುತ್ತಿದ್ದಾರೋ ಅವು ನಿಜವಾಗಿಯೂ ವಸ್ತುಸ್ಥಿತಿಯಾಗಿದೆ. ನಿಸರ್ಗದ ಎಲ್ಲ ಕಡೆಗಳಲ್ಲೂ ಆ ಬಗ್ಗೆ ಸಾಕ್ಷ್ಯ ನುಡಿಯುವಂತಹ ದೃಷ್ಟಾಂತಗಳು ಇವೆ. ಜನರು ಕಣ್ತೆರೆದು ನೋಡಿದರೆ, ಕುರ್‌ಆನ್ ಯಾವೆಲ್ಲಾ ವಿಷಯಗಳ ಮೇಲೆ ವಿಶ್ವಾಸವಿಡಲು ಕರೆ ಕೊಡುತ್ತದೋ, ಭೂಮಿ-ಆಕಾಶಗಳಲ್ಲಿ ಹರಡಿರುವ ಅಸಂಖ್ಯ ದೃಷ್ಟಾಂತಗಳು ಅದನ್ನು ದೃಢೀಕರಿಸುತ್ತಿರುವುದನ್ನು ಅವರು ಕಾಣುವರು.

3. ಈ ಭೂಮಿಯನ್ನು ವಿಸ್ತರಿಸಿದವನೂ ಇದರಲ್ಲಿ ಪರ್ವತಗಳ ಗೂಟಗಳನ್ನು ನಾಟಿದವನೂ ನದಿಗಳನ್ನು ಹರಿಸಿದವನೂ ಅವನೇ. ಅವನೇ ಪ್ರತಿಯೊಂದು ವಿಧದ ಫಲಗಳ ಜೋಡಿಗಳನ್ನು ಸೃಷ್ಟಿಸಿದನು ಮತ್ತು ಅವನೇ ಹಗಲಿನ ಮೇಲೆ ಇರುಳನ್ನು ಆಚ್ಛಾದಿಸುತ್ತಾನೆ. ನಿಶ್ಚಯವಾಗಿಯೂ ಆಲೋಚಿಸುವವರಿಗೆ ಇವುಗಳಲ್ಲೆಲ್ಲ ಅನೇಕ ದೃಷ್ಟಾಂತಗಳಿವೆ.

وَهُوَ الَّذِي مَدَّ الْأَرْضَ وَجَعَلَ فِيهَا
رَوَاسِيَ وَأَنْهَارًا ۖ وَمِنْ كُلِّ الثَّمَرَاتِ
جَعَلَ فِيهَا زَوْجَيْنِ اثْنَيْنِ ۖ يُغْشِي اللَّيْلَ
النَّهَارَ ۚ إِنَّ فِي ذَٰلِكَ لَآيَاتٍ لِقَوْمٍ
يَتَفَكَّرُونَ ﴿٣﴾

4. ಭೂಮಿಯಲ್ಲಿ ಒಂದಕ್ಕೊಂದು ತಾಗಿಕೊಂಡಿರುವ ಬೇರೆ ಬೇರೆ ಭೂಭಾಗಗಳಿವೆ. ದ್ರಾಕ್ಷಾ ತೋಟಗಳಿವೆ, ಹೊಲಗಳಿವೆ, ಖರ್ಜೂರದ ಮರಗಳೂ ಇದ್ದು ಅವುಗಳಲ್ಲಿ ಕೆಲವು ಒಂದೇ ಕಾಂಡದಿಂದ ಮೇಲೆದ್ದು ಕವಲೊಡೆಯದವುಗಳೂ ಇನ್ನು ಕೆಲವು ಕವಲೊಡೆದವುಗಳೂ ಇವೆ. ಇವೆಲ್ಲವುಗಳೂ ಒಂದೇ ನೀರಿನಿಂದ ತೋಯಿಸಲ್ಪಡುತ್ತವೆ. ಆದರೆ ನಾವು ರುಚಿಯಲ್ಲಿ ಕೆಲವನ್ನು ಮೇಲ್ತರದ್ದಾಗಿಯೂ ಇನ್ನು ಕೆಲವನ್ನು ಕೀಳ್ತರದ್ದಾಗಿಯೂ ಮಾಡಿ ಬಿಡುತ್ತೇವೆ. ಇವೆಲ್ಲವುಗಳಲ್ಲಿಯೂ ವಿವೇಕಮತಿಗಳಿಗೆ ಅನೇಕ ದೃಷ್ಟಾಂತಗಳಿವೆ.

وَفِي الْأَرْضِ قِطَعٌ مُتَجَاوِرَاتٌ وَجَنَّاتٌ
مِنْ أَعْنَابٍ وَزَرْعٌ وَنَخِيلٌ صِنْوَانٌ
وَغَيْرُ صِنْوَانٍ يُسْقَىٰ بِمَاءٍ وَاحِدٍ
وَنُفَضِّلُ بَعْضَهَا عَلَىٰ بَعْضٍ فِي الْأُكُلِ ۚ
إِنَّ فِي ذَٰلِكَ لَآيَاتٍ لِقَوْمٍ يَعْقِلُونَ ﴿٤﴾

5. ನೀವು ಆಶ್ಚರ್ಯಪಡುವುದಾದರೆ, "ನಾವು ಸತ್ತು ಮಣ್ಣಾಗಿ ಹೋದ ಬಳಿಕ ಪುನರಪಿ ಸೃಷ್ಟಿಸಲ್ಪಡುವೆವೋ?" ಎಂದು ಪ್ರಶ್ನಿಸುವವರ ಮಾತು ಆಶ್ಚರ್ಯಪಡತಕ್ಕದ್ದೇ ಆಗಿದೆ. ಇವರು ತಮ್ಮ ಪ್ರಭುವನ್ನು ನಿಷೇಧಿಸಿದವರು.[3] ಇವರು ಕೊರಳಲ್ಲಿ ಕೋಳ ಬಿದ್ದವರು.[4] ಇವರೇ ನರಕದವರು ಮತ್ತು ನರಕದಲ್ಲಿ ಸದಾ ಉಳಿಯುವವರು.

وَإِنْ تَعْجَبْ فَعَجَبٌ قَوْلُهُمْ أَإِذَا كُنَّا
تُرَابًا أَإِنَّا لَفِي خَلْقٍ جَدِيدٍ ۗ أُولَٰئِكَ
الَّذِينَ كَفَرُوا بِرَبِّهِمْ ۖ وَأُولَٰئِكَ
الْأَغْلَالُ فِي أَعْنَاقِهِمْ ۖ وَأُولَٰئِكَ أَصْحَابُ
النَّارِ ۖ هُمْ فِيهَا خَالِدُونَ ﴿٥﴾

6. ಇವರು ಒಳಿತಿಗಿಂತ ಮೊದಲು ಕೆಡುಕಿಗಾಗಿ ಆತುರ ಪಡುತ್ತಿದ್ದಾರೆ.[5] ವಸ್ತುತಃ ಇವರಿಗಿಂತ ಮುಂಚೆ (ಈ ರೀತಿ ನಡೆದವರ ಮೇಲೆ ಅಲ್ಲಾಹನ ಯಾತನೆಯ) ಬೋಧಪ್ರದವಾದ ದೃಷ್ಟಾಂತಗಳು

وَيَسْتَعْجِلُونَكَ بِالسَّيِّئَةِ قَبْلَ الْحَسَنَةِ
وَقَدْ خَلَتْ مِنْ قَبْلِهِمُ الْمَثُلَاتُ ۗ وَإِنَّ

3. ಅರ್ಥಾತ್- ಪರಲೋಕವನ್ನು ನಿರಾಕರಿಸುವ ಮೂಲಕ ಅವರು ಅಲ್ಲಾಹನನ್ನೂ ಅವನ ಮಹಿಮೆ ಮತ್ತು ಯುಕ್ತಿಯನ್ನೂ ನಿರಾಕರಿಸುತ್ತಾರೆ. ನಾವು ಮಣ್ಣಲ್ಲಿ ಸೇರಿಹೋದ ಬಳಿಕ ಮತ್ತೊಮ್ಮೆ ಸೃಷ್ಟಿಸಲ್ಪಡುವುದು ದುಃಸಾಧ್ಯ ಎಂದು ಅವರು ಹೇಳುತ್ತಾರೆ. ಅವರ ಹೇಳಿಕೆಯಲ್ಲಿ ಅವರನ್ನು ಸೃಷ್ಟಿಸಿದ ದೇವನು ಅಶಕ್ತನೂ, ಅಸಹಾಯಕನೂ, ತಿಳಿಗೇಡಿಯೂ, ಬುದ್ಧಿಹೀನನೂ ಆಗಿದ್ದಾನೆಂಬ ಅರ್ಥವೂ ಅಡಕವಾಗಿದೆ. (ಶಾಂತಂ ಪಾಪಂ)

4. ಕೊರಳಲ್ಲಿ ಕೋಳ ಬಿದ್ದಿರುವುದು ಸೆರೆಯಾಳಾಗಿರುವುದರ ಸಂಕೇತವಾಗಿದೆ. ಅವರ ಕೊರಳಲ್ಲಿ ಕೋಳ ಬಿದ್ದಿವೆ ಎಂದರೆ ಅವರು ತಮ್ಮ ಅಜ್ಞಾನ, ಜಿಗುಟುತನ, ಮನಃಸೇಚ್ಛೆ ಮತ್ತು ಹಿರಿಯರ ಅಂಧಾನುಕರಣೆಯ ದಾಸರಾಗಿ ಮಾರ್ಪಟ್ಟಿರುವವರು. ಅವರು ಸ್ವತಂತ್ರವಾಗಿ ಆಲೋಚಿಸಲಾರರು. ಅವರು ತಮ್ಮ ಪೂರ್ವಗ್ರಹಗಳಲ್ಲಿ ಹೇಗೆ ಸಿಲುಕಿಕೊಂಡಿರುವರೆಂದರೆ ಅವರು ಪರಲೋಕದ ಮೇಲೆ ವಿಶ್ವಾಸ ವಿಡಲಾರರು. ಅದು ಸಾದ್ಯಂತ ಸತ್ಯವಾದುದಾದರೂ ಸರಿಯೇ. ಪರಲೋಕದ ನಿರಾಕರಣೆಯಲ್ಲಿ ಅವರು ದೃಢವಾಗಿ ನಿಲ್ಲುತ್ತಾರೆ. ಅದು ಎಷ್ಟು ಅಸಮಂಜಸವಾದ ಕಲ್ಪನೆಯಾದರೂ ಸರಿಯೇ.

5. ಅರ್ಥಾತ್- ಯಾತನೆಯನ್ನು ಅಪೇಕ್ಷಿಸುತ್ತಿದ್ದಾರೆ.

ಗತಿಸಿ ಹೋಗಿವೆ. ವಾಸ್ತವದಲ್ಲಿ ನಿನ್ನ ಪ್ರಭು ಜನರ ಅತಿರೇಕಗಳನ್ನು ಲೆಕ್ಕಿಸದೆ ಕ್ಷಮಾದಾನ ಮಾಡುವವನು ಮತ್ತು ನಿನ್ನ ಪ್ರಭು ಘೋರ ಶಿಕ್ಷೆಗೆ ಗುರಿಪಡಿಸುವವನು ಎಂಬುದೂ ಪರಮಾರ್ಥ.

رَبَّكَ لَذُوْ مَغْفِرَةٍ لِّلنَّاسِ عَلٰى ظُلْمِهِمْ ۚ وَاِنَّ رَبَّكَ لَشَدِيْدُ الْعِقَابِ ٦

7. ನಿಮ್ಮನ್ನು ನಿಷೇಧಿಸಿದವರು- "ಈ ವ್ಯಕ್ತಿಯ ಮೇಲೆ ಇವನ ಪ್ರಭುವಿನ ಕಡೆಯಿಂದ ಯಾವುದಾದರೊಂದು ನಿದರ್ಶನವೇಕೆ ಇಳಿದಿಲ್ಲ?" ಎಂದು ಕೇಳುತ್ತಾರೆ. ನೀವಂತು ಕೇವಲ ಎಚ್ಚರಿಕೆ ಕೊಡುವವರಾಗಿರುತ್ತೀರಿ ಮತ್ತು ಪ್ರತಿಯೊಂದು ಜನಾಂಗಕ್ಕೂ ಓರ್ವ ಮಾರ್ಗದರ್ಶಕನಿದ್ದಾನೆ.

وَيَقُوْلُ الَّذِيْنَ كَفَرُوْا لَوْلَآ اُنْزِلَ عَلَيْهِ اٰيَةٌ مِّنْ رَّبِّهٖ ۗ اِنَّمَآ اَنْتَ مُنْذِرٌ وَّلِكُلِّ قَوْمٍ هَادٍ ٧

8. ಅಲ್ಲಾಹನು ಪ್ರತಿಯೋರ್ವ ಗರ್ಭಿಣಿಯ ಗರ್ಭವನ್ನು ಅರಿತಿರುತ್ತಾನೆ. ಅದರಲ್ಲಾಗುವ ವೃದ್ಧಿ-ಕ್ಷಯಗಳನ್ನೂ ಅರಿತಿರುತ್ತಾನೆ ಮತ್ತು ಪ್ರತಿಯೊಂದು ವಸ್ತುವಿಗೂ ಅವನಲ್ಲೊಂದು ಪ್ರಮಾಣ ನಿಶ್ಚಯ ವಾಗಿರುತ್ತದೆ.

اَللّٰهُ يَعْلَمُ مَا تَحْمِلُ كُلُّ اُنْثٰى وَمَا تَغِيْضُ الْاَرْحَامُ وَمَا تَزْدَادُ ۗ وَكُلُّ شَيْءٍ عِنْدَهٗ بِمِقْدَارٍ ٨

9. ಅವನು ಎಲ್ಲ ಪ್ರತ್ಯಕ್ಷಾಪ್ರತ್ಯಕ್ಷಗಳ ಜ್ಞಾನಿ. ಅವನು ಅತಿ ಮಹಾನನು ಮತ್ತು ಚಿರೋನ್ನತನು.

عٰلِمُ الْغَيْبِ وَالشَّهَادَةِ الْكَبِيْرُ الْمُتَعَالِ ٩

10. ನಿಮ್ಮಲ್ಲಾರಾದರೂ ಸ್ವರವೆತ್ತಿ ಮಾತಾಡಲಿ ಅಥವಾ ಮೆಲುದನಿಯಿಂದ ಮಾತಾಡಲಿ, ನಿಶಾಂಧಕಾರದಲ್ಲಿ ಅಡಗಿರಲಿ ಯಾ ಹಗಲಿನ ಬೆಳಕಿನಲ್ಲಿ ಚಲಿಸುತ್ತಿರಲಿ ಅವನ ಮಟ್ಟಿಗೆ ಎಲ್ಲವೂ ಸರಿಸಮಾನ.

سَوَآءٌ مِّنْكُمْ مَّنْ اَسَرَّ الْقَوْلَ وَمَنْ جَهَرَ بِهٖ وَمَنْ هُوَ مُسْتَخْفٍ بِالَّيْلِ وَسَارِبٌۢ بِالنَّهَارِ ١٠

11. ಅವನಿಂದ ನೇಮಕಗೊಂಡ ಕಾವಲುಗಾರರು ಪ್ರತಿಯೊಬ್ಬನ ಮುಂದೆಯೂ ಹಿಂದೆಯೂ ಇದ್ದಾರೆ. ಅವರು ಅಲ್ಲಾಹನ ಅಪ್ಪಣೆಯಿಂದ ಅವನ ಮೇಲ್ವಿಚಾರಣೆ ನಡೆಸುತ್ತಿರುತ್ತಾರೆ. ವಾಸ್ತವದಲ್ಲಿ ಒಂದು ಜನಾಂಗವು ಸ್ವತಃ ತಾನೇ ತನ್ನ ಸ್ಥಿತಿಯನ್ನು ಬದಲಾಯಿಸಿ ಕೊಳ್ಳುವವರೆಗೂ ಅಲ್ಲಾಹನು ಅದರ ಸ್ಥಿತಿಯನ್ನು ಬದಲಾಯಿಸುವುದಿಲ್ಲ. ಅಲ್ಲಾಹನು ಯಾವುದಾದರೊಂದು ಜನಾಂಗಕ್ಕೆ ಕೇಡುಂಟುಮಾಡುವ ನಿರ್ಧಾರ ಕೈಗೊಂಡರೆ ಅದನ್ನು ಯಾರಿಂದಲೂ ತಡೆಯಲಾಗದು ಮತ್ತು ಇಂತಹ ಜನಾಂಗಕ್ಕೆ ಅಲ್ಲಾಹನ ಎದುರಾಗಿ ಯಾವ ಸಹಾಯಕನೂ ಸಿಗಲಾರನು.

لَهٗ مُعَقِّبٰتٌ مِّنْۢ بَيْنِ يَدَيْهِ وَمِنْ خَلْفِهٖ يَحْفَظُوْنَهٗ مِنْ اَمْرِ اللّٰهِ ۗ اِنَّ اللّٰهَ لَا يُغَيِّرُ مَا بِقَوْمٍ حَتّٰى يُغَيِّرُوْا مَا بِاَنْفُسِهِمْ ۗ وَاِذَآ اَرَادَ اللّٰهُ بِقَوْمٍ سُوْٓءًا فَلَا مَرَدَّ لَهٗ ۚ وَمَا لَهُمْ مِّنْ دُوْنِهٖ مِنْ وَّالٍ ١١

12. ನಿಮ್ಮ ಮುಂದೆ ಮಿಂಚುಗಳನ್ನು ಮಿಂಚಿಸುವವನು ಅವನೇ. ಅವುಗಳನ್ನು ಕಂಡು ನಿಮಗೆ ಅಂಜಿಕೆಯೂ ಆಸೆಯೂ ಉಂಟಾಗುತ್ತವೆ. ಜಲಭರಿತವಾದ ಮೇಘಗಳನ್ನು ಮೇಲೇರಿಸುವವನೂ ಅವನೇ.

هُوَ الَّذِيْ يُرِيْكُمُ الْبَرْقَ خَوْفًا وَّطَمَعًا وَّيُنْشِئُ السَّحَابَ الثِّقَالَ ١٢

13. ಮೋಡಗಳ ಘರ್ಜನೆಯು ಅವನ ಸ್ತೋತ್ರದೊಂದಿಗೆ ಅವನ ಕೀರ್ತನೆ ಮಾಡುತ್ತದೆ[6] ಮತ್ತು ದೇವಚರರು ಅವನ ಭೀತಿಯಿಂದ ನಡುಗುತ್ತ ಅವನ ಕೀರ್ತನೆ ಮಾಡುತ್ತಾರೆ. ಅವನು ಸಿಡಿಲುಗಳನ್ನು ಕಳುಹಿಸುತ್ತಾನೆ ಮತ್ತು (ಅನೇಕ ವೇಳೆ) ಜನರು ಅಲ್ಲಾಹನ ವಿಷಯದಲ್ಲಿ ಜಗಳಾಡುತ್ತಿರುವಾಗಲೇ ಅವುಗಳನ್ನು ತನಗಿಷ್ಟ ಬಂದವರ ಮೇಲೆ ಎರಗಿಸಿ ಬಿಡುತ್ತಾನೆ. ವಾಸ್ತವದಲ್ಲಿ ಅವನು ಅತ್ಯಂತ ಪ್ರಬಲನು.

وَيُسَبِّحُ الرَّعْدُ بِحَمْدِهٖ وَالْمَلٰٓئِكَةُ
مِنْ خِيْفَتِهٖ ۚ وَيُرْسِلُ الصَّوَاعِقَ فَيُصِيْبُ
بِهَا مَنْ يَّشَآءُ وَهُمْ يُجَادِلُوْنَ فِي اللّٰهِ ۚ
وَهُوَ شَدِيْدُ الْمِحَالِ ۝١٣

14. ಅವನನ್ನು ಮಾತ್ರ ಪ್ರಾರ್ಥಿಸುವುದೇ ಸರಿ.[7] ಅವನನ್ನು ಬಿಟ್ಟು ಇವರು ಮೊರೆಯಿಡುತ್ತಿರುವ ಇತರರು ಇವರ ಪ್ರಾರ್ಥನೆಗೆ ಯಾವ ಉತ್ತರವನ್ನೂ ಕೊಡಲಾರರು. ಅವರನ್ನು ಕೂಗಿ ಕರೆಯುವುದೆಂದರೆ - ಒಬ್ಬನು ನೀರಿದ್ದ ಕಡೆಗೆ ಕೈಗಳೆರಡನ್ನೂ ಚಾಚಿ, ನೀನು ನನ್ನ ಬಾಯಿಗೆ ಬಾ ಎಂದು ಅದರೊಡನೆ ಪ್ರಾರ್ಥಿಸಿ ಕೊಂಡಂತೆ. ವಸ್ತುತಃ ನೀರು (ತಾನಾಗಿ) ಅವನ ಬಳಿಗೆ ತಲಪಲಾರದು. ಇದೇ ರೀತಿಯಲ್ಲಿ ಸತ್ಯನಿಷೇಧಿಗಳ ಪ್ರಾರ್ಥನೆಗಳೂ ಗುರಿ ಮುಟ್ಟಲಾರವು.

لَهٗ دَعْوَةُ الْحَقِّ ۗ وَالَّذِيْنَ يَدْعُوْنَ مِنْ
دُوْنِهٖ لَا يَسْتَجِيْبُوْنَ لَهُمْ بِشَيْءٍ اِلَّا
كَبَاسِطِ كَفَّيْهِ اِلَى الْمَآءِ لِيَبْلُغَ فَاهُ وَمَا
هُوَ بِبَالِغِهٖ ۗ وَمَا دُعَآءُ الْكٰفِرِيْنَ اِلَّا فِيْ ضَلٰلٍ ۝١٤

15. ಆಕಾಶಗಳಲ್ಲೂ ಭೂಮಿಯಲ್ಲೂ ಇರುವ ಪ್ರತಿಯೊಂದು ವಸ್ತುವೂ ಇಚ್ಛಾಪೂರ್ವಕವಾಗಿಯೋ ಅನಿಚ್ಛಾಪೂರ್ವಕವಾಗಿಯೋ 'ಸಾಷ್ಟಾಂಗ' ಮಾಡುತ್ತಿರುವುದು[8] ಅಲ್ಲಾಹನಿಗೇ ಆಗಿರುತ್ತದೆ ಮತ್ತು ಸಕಲ ವಸ್ತುಗಳ ನೆರಳುಗಳು ಬೆಳಗು ಬೈಗುಗಳಲ್ಲಿ ಅವನ ಮುಂದೆ ಬಾಗುತ್ತವೆ.[9]

وَلِلّٰهِ يَسْجُدُ مَنْ فِي السَّمٰوٰتِ وَالْاَرْضِ
طَوْعًا وَّكَرْهًا وَّظِلٰلُهُمْ بِالْغُدُوِّ وَالْاٰصَالِ ۝١٥ السجدة

6. ಅರ್ಥಾತ್- ಗಾಳಿಯನ್ನು ಬೀಸುವ, ಆವಿಯನ್ನು ಮೇಲೇರಿಸುವ, ದಟ್ಟ ಮೋಡಗಳನ್ನು ಒಟ್ಟು ಸೇರಿಸುವ, ಮಿಂಚನ್ನು ಮಳೆಗೆ ಹೇತುವನ್ನಾಗಿ ಮಾಡುವ ಮತ್ತು ಈ ರೀತಿ ಭೂಮಿಯ ಎಲ್ಲಾ ಸೃಷ್ಟಿಗಳಿಗೆ ನೀರಿನ ವ್ಯವಸ್ಥೆ ಮಾಡುವ ದೇವನು ತನ್ನ ಸಾಮರ್ಥ್ಯ ಮತ್ತು ಯುಕ್ತಿಗಳಲ್ಲಿ ಪರಿಪೂರ್ಣನು. ತನ್ನ ಗುಣವಿಶೇಷತೆಗಳಲ್ಲಿ ಯಾವುದೇ ರೀತಿಯ ದೋಷವಿಲ್ಲದವನು. ತನ್ನ ದೇವತ್ವದಲ್ಲಿ ಯಾವುದೇ ಸಹಭಾಗಿತ್ವ ಇಲ್ಲದವನು - ಎಂದು ಮೋಡಗಳ ಗುಡುಗು ಸಾರಿ ಹೇಳುತ್ತದೆ. ಪ್ರಾಣಿಗಳು ಕೇಳುವಂತೆ ಅದನ್ನು ಕೇಳುವವರು ಮೋಡಗಳಿಂದ ಗುಡುಗಿನ ಸದ್ದನ್ನು ಮಾತ್ರ ಕೇಳುತ್ತಾರೆ. ಆದರೆ ಪ್ರಜ್ಞಾವಂತ ಕಿವಿಗಳನ್ನು ಹೊಂದಿರುವವರು ಮೋಡಗಳ ಗುಡುಗಿನಲ್ಲಿ ಏಕದೇವತ್ವದ ಘೋಷಣೆಯನ್ನು ಆಲಿಸುತ್ತಾರೆ.

7. ಪ್ರಾರ್ಥಿಸುವುದು ಎಂದರೆ ತನ್ನ ಬೇಡಿಕೆಗಳ ಈಡೇರಿಕೆಯಲ್ಲಿ ನೆರವಾಗುವಂತೆ ಪ್ರಾರ್ಥಿಸುವುದಾಗಿದೆ. ಅರ್ಥಾತ್ ಬಯಕೆಗಳ ಈಡೇರಿಕೆ ಮತ್ತು ಕಷ್ಟ ಪರಿಹಾರದ ಸಂಪೂರ್ಣ ಅಧಿಕಾರ ಅಲ್ಲಾಹನ ಹಸ್ತದಲ್ಲೇ ಇದೆ. ಆದ್ದರಿಂದ ಅವನೊಡನೆ ಪ್ರಾರ್ಥಿಸುವುದು ಮಾತ್ರ ಸರಿಯಾದುದಾಗಿದೆ.

8. ಸಾಷ್ಟಾಂಗವೆರಗುವುದೆಂದರೆ ಅನುಸರಣೆಯಲ್ಲಿ ಬಾಗುವುದು, ಆಜ್ಞೆಯನ್ನು ಪಾಲಿಸುವುದು ಮತ್ತು ಶಿರಸಾ ವಹಿಸಿ ಅನುಸರಿಸುವುದು ಎಂದಾಗಿದೆ.

16. ಆಕಾಶಗಳ ಮತ್ತು ಭೂಮಿಯ ಪ್ರಭು ಯಾರೆಂದು ಇವರನ್ನು ಕೇಳಿರಿ- ಹೇಳಿರಿ, 'ಅಲ್ಲಾಹ್'- ಹಾಗಿದ್ದರೆ ಹೇಳಿರಿ- "ವಸ್ತುಸ್ಥಿತಿ ಇದಾಗಿರುವಾಗ ನೀವು ಅವನನ್ನು ಬಿಟ್ಟು ಸ್ವತಃ ತಮಗೇ ಏನಾದರೂ ಲಾಭ-ನಷ್ಟ ಮಾಡುವ ಅಧಿಕಾರವಿಲ್ಲದಂತಹವರನ್ನು ನಿಮ್ಮ ರಕ್ಷಕ ಮಿತ್ರರನ್ನಾಗಿರಿಸಿಕೊಂಡಿರುತ್ತೀರಾ?" ಹೇಳಿರಿ- ಕುರುಡನೂ ದೃಷ್ಟಿಯುಳ್ಳವನೂ ಸರಿಸಮಾನರೇ? ಪ್ರಕಾಶವೂ ಅಂಧಕಾರಗಳೂ ಸರಿಸಮಾನವೇ? ಹಾಗಿಲ್ಲದಿದ್ದರೆ ಇವರು ಮಾಡಿಕೊಂಡಿರುವ ಸಹಭಾಗಿಗಳೂ ಅಲ್ಲಾಹನ ಹಾಗೆಯೇ ಏನನ್ನಾದರೂ ಸೃಷ್ಟಿಸಿದ್ದುಂಟೇ? ಆ ಕಾರಣದಿಂದ ಸೃಷ್ಟಿಯ ವಿಷಯವು ಅವರಿಗೆ ಅಸ್ಪಷ್ಟವಾಗಿಬಿಟ್ಟಿತೇ? ಹೇಳಿರಿ- ಸಕಲ ವಸ್ತುಗಳ ಸೃಷ್ಟಿಕರ್ತನು ಅಲ್ಲಾಹನು ಮಾತ್ರ ಮತ್ತು ಅವನು ಏಕೈಕನೂ ಅಜೇಯನೂ ಆಗಿರುತ್ತಾನೆ.

قُلْ مَنْ رَّبُّ السَّمٰوٰتِ وَالْاَرْضِؕ قُلِ اللّٰهُؕ
قُلْ اَفَاتَّخَذْتُمْ مِّنْ دُوْنِهٖۤ اَوْلِيَآءَ لَا
يَمْلِكُوْنَ لِاَنْفُسِهِمْ نَفْعًا وَّلَا ضَرًّاؕ قُلْ
هَلْ يَسْتَوِى الْاَعْمٰى وَالْبَصِيْرُ ۙ
اَمْ هَلْ تَسْتَوِى الظُّلُمٰتُ وَالنُّوْرُ ۚ
اَمْ جَعَلُوْا لِلّٰهِ شُرَكَآءَ خَلَقُوْا كَخَلْقِهٖ
فَتَشَابَهَ الْخَلْقُ عَلَيْهِمْؕ قُلِ اللّٰهُ خَالِقُ
كُلِّ شَىْءٍ وَّهُوَ الْوَاحِدُ الْقَهَّارُ ﴿١٦﴾

17. ಅಲ್ಲಾಹನು ಆಕಾಶದಿಂದ ಮಳೆ ಸುರಿಸಿದನು. ಪ್ರತಿಯೊಂದು ನದಿ-ನಾಲೆ ಅದನ್ನು ತನ್ನಲ್ಲಿ ತುಂಬುವಷ್ಟನ್ನು ಕೊಂಡೊಯ್ದಿತು. ತರುವಾಯ ಮಹಾಪೂರವೆದ್ದಾಗ ಮೇಲ್ತಳದಲ್ಲಿ ನೊರೆಯೂ ಬಂದಿತು. ಇದೇ ತರದ ನೊರೆಯು ಆಭರಣ ಹಾಗೂ ಪಾತ್ರೆಗಳನ್ನು ಮಾಡಲಿಕ್ಕಾಗಿ ಲೋಹಗಳನ್ನು ಬೆಂಕಿಯಲ್ಲಿ ಕರಗಿಸುವಾಗ ಅವುಗಳಿಂದಲೂ ಏಳುತ್ತದೆ. ಈ ಉಪಮೆಯ ಮೂಲಕವೇ ಅಲ್ಲಾಹನು ಸತ್ಯ ಮತ್ತು ಅಸತ್ಯಗಳನ್ನು ವಿವರಿಸುತ್ತಾನೆ. ನೊರೆ ಆರಿ ಹೋಗುತ್ತದೆ ಮತ್ತು ಮಾನವನಿಗೆ ಉಪಯುಕ್ತವಾದುದು ಭೂಮಿಯಲ್ಲಿ ತಂಗಿಕೊಳ್ಳುತ್ತದೆ. ಹೀಗೆ ಅಲ್ಲಾಹನು ಉಪಮೆಗಳ ಮೂಲಕ ವಿಷಯವನ್ನು ವಿವರಿಸಿ ಹೇಳುತ್ತಾನೆ.

اَنْزَلَ مِنَ السَّمَآءِ مَآءً فَسَالَتْ اَوْدِيَةٌۢ
بِقَدَرِهَا فَاحْتَمَلَ السَّيْلُ زَبَدًا رَّابِيًاؕ
وَمِمَّا يُوْقِدُوْنَ عَلَيْهِ فِى النَّارِ ابْتِغَآءَ
حِلْيَةٍ اَوْ مَتَاعٍ زَبَدٌ مِّثْلُهٗؕ كَذٰلِكَ
يَضْرِبُ اللّٰهُ الْحَقَّ وَالْبَاطِلَ ۬ۚ
فَاَمَّا الزَّبَدُ فَيَذْهَبُ جُفَآءًۚ وَاَمَّا مَا
يَنْفَعُ النَّاسَ فَيَمْكُثُ فِى الْاَرْضِؕ
كَذٰلِكَ يَضْرِبُ اللّٰهُ الْاَمْثَالَ ؕ﴿١٧﴾

18. ತಮ್ಮ ಪ್ರಭುವಿನ ಕರೆಗೆ ಓಗೊಟ್ಟವರಿಗೆ ಉತ್ತಮ ಪ್ರತಿಫಲವಿದೆ. ಅದನ್ನು ಸ್ವೀಕರಿಸದಿದ್ದವರು ಭೂಮಿಯ ಸಕಲ ಸಂಪತ್ತಿನ ಒಡೆಯರಾಗಿದ್ದರೂ, ಅಷ್ಟೇ ಇನ್ನೂ ಒದಗಿಸಿಕೊಂಡರೂ ಅದೆಲ್ಲವನ್ನೂ ಅಲ್ಲಾಹನ ಹಿಡಿತದಿಂದ ಪಾರಾಗಲಿಕ್ಕಾಗಿ ಪರಿಹಾರ ರೂಪದಲ್ಲಿ ಕೊಟ್ಟು ಬಿಡಲು ಸಿದ್ಧರಾಗುವರು. ಇವರಿಂದ ಕೆಟ್ಟ ರೀತಿಯಲ್ಲಿ ಲೆಕ್ಕಾಚಾರ ಪಡೆಯಲಾಗುವುದು ಮತ್ತು ಅವರ ವಾಸಸ್ಥಾನವು 'ನರಕ' ಆಗಿರುವುದು. ಅತ್ಯಂತ ನಿಕೃಷ್ಟ ಸ್ಥಾನವದು.

لِلَّذِيْنَ اسْتَجَابُوْا لِرَبِّهِمُ الْحُسْنٰىؕ
وَالَّذِيْنَ لَمْ يَسْتَجِيْبُوْا لَهٗ لَوْ اَنَّ لَهُمْ
مَّا فِى الْاَرْضِ جَمِيْعًا وَّمِثْلَهٗ مَعَهٗ
لَافْتَدَوْا بِهٖؕ اُولٰٓئِكَ لَهُمْ سُوْٓءُ الْحِسَابِ ۙ
وَمَاْوٰىهُمْ جَهَنَّمُؕ وَبِئْسَ الْمِهَادُ ﴿١٨﴾

9. ನೆರಳು ಸಾಷ್ಟಾಂಗವೆರಗುವುದೆಂದರೆ, ವಸ್ತುಗಳ ನೆರಳು ಬೆಳಗು ಬೈಗುಗಳಲ್ಲಿ ಪಶ್ಚಿಮ ಮತ್ತು ಪೂರ್ವ ದಿಕ್ಕುಗಳಲ್ಲಿ ಬೀಳುವುದು, ಇವೆಲ್ಲವೂ ನಿರ್ದಿಷ್ಟ ಆಜ್ಞೆಗೆ ಬದ್ಧವಾಗಿದೆ ಮತ್ತು ಯಾವುದೋ ನಿಯಮಕ್ಕೆ ಅಧೀನವಾಗಿದೆ ಎಂಬುದನ್ನು ಸೂಚಿಸುತ್ತದೆ.

19. ನಿಮ್ಮ ಪ್ರಭು ನಿಮ್ಮ ಮೇಲೆ ಅವತೀರ್ಣಗೊಳಿಸಿರುವ ಈ ಗ್ರಂಥವನ್ನು ಸತ್ಯವೆಂದು ತಿಳಿಯುವವನೂ ಈ ಪರಮಾರ್ಥದಿಂದ ಅಂಧನಾಗಿರುವವನೂ ಪರಸ್ಪರ ಸಮಾನರಾಗಿರುವುದೆಂತು? ವಾಸ್ತವ ದಲ್ಲಿ ಬುದ್ಧಿಜೀವಿಗಳೇ ಉಪದೇಶ ಸ್ವೀಕರಿಸುತ್ತಾರೆ.

أَفَمَنْ يَعْلَمُ أَنَّمَآ أُنْزِلَ إِلَيْكَ مِنْ رَّبِّكَ
الْحَقُّ كَمَنْ هُوَ أَعْمٰى ۚ إِنَّمَا يَتَذَكَّرُ
أُولُوا الْأَلْبَابِ ﴿١٩﴾

20. ಅವರು ಅಲ್ಲಾಹನೊಡನೆ ಮಾಡಿದ ಕರಾರನ್ನು ಪಾಲಿಸುತ್ತಾರೆ. ಅದನ್ನು (ಕರಾರನ್ನು) ಬಲಗೊಳಿಸಿಕೊಂಡ ಬಳಿಕ ಮುರಿದು ಬಿಡುವುದಿಲ್ಲ.

الَّذِيْنَ يُوْفُوْنَ بِعَهْدِ اللّٰهِ وَلَا
يَنْقُضُوْنَ الْمِيْثَاقَ ﴿٢٠﴾

21. ಅಲ್ಲಾಹನು ಯಾವ ಯಾವ ಸಂಬಂಧಗಳನ್ನು ಕಾಪಾಡಲು ಆಜ್ಞೆ ಕೊಟ್ಟಿರುವನೋ ಅವುಗಳನ್ನು ಕಾಪಾಡಿಕೊಳ್ಳುತ್ತಾರೆ. ತಮ್ಮ ಪ್ರಭುವನ್ನು ಭಯಪಡುತ್ತಾರೆ. ಎಲ್ಲಾದರೂ ತಮ್ಮೊಡನೆ ಕೆಟ್ಟ ರೀತಿಯ ವಿಚಾರಣೆ ನಡೆದುಬಿಟ್ಟೀತೋ ಎಂದು ಹೆದರುತ್ತಾರೆ.

وَالَّذِيْنَ يَصِلُوْنَ مَآ أَمَرَ اللّٰهُ بِهٖٓ أَنْ
يُّوْصَلَ وَيَخْشَوْنَ رَبَّهُمْ وَيَخَافُوْنَ
سُوْٓءَ الْحِسَابِ ﴿٢١﴾

22. ಅವರು ತಮ್ಮ ಪ್ರಭುವಿನ ಸಂಪ್ರೀತಿಗಾಗಿ ಸಹನೆಯಿಂದ ವರ್ತಿಸು ತ್ತಾರೆ. ನಮಾಝನ್ನು ಸಂಸ್ಥಾಪಿಸುತ್ತಾರೆ. ನಾವು ನೀಡಿರುವ ಜೀವನ ಸಾಧನಗಳಿಂದ ಬಹಿರಂಗವಾಗಿಯೂ ರಹಸ್ಯವಾಗಿಯೂ ವ್ಯಯಿಸುತ್ತಾರೆ. ಕೆಡುಕುಗಳನ್ನು ಒಳಿತುಗಳಿಂದ ನಿವಾರಿಸುತ್ತಾರೆ. ಪರಲೋಕ ಗೃಹವು ಅವರಿಗೇ ಆಗಿರುತ್ತದೆ.

وَالَّذِيْنَ صَبَرُوا ابْتِغَآءَ وَجْهِ رَبِّهِمْ
وَأَقَامُوا الصَّلٰوةَ وَأَنْفَقُوْا مِمَّا رَزَقْنٰهُمْ
سِرًّا وَّعَلَانِيَةً وَّيَدْرَءُوْنَ بِالْحَسَنَةِ
السَّيِّئَةَ أُولٰٓئِكَ لَهُمْ عُقْبَى الدَّارِ ﴿٢٢﴾

23. ಅರ್ಥಾತ್ ಅವರ ಶಾಶ್ವತ ನಿವಾಸವಾಗಲಿರುವ ಸ್ವರ್ಗೋದ್ಯಾನಗಳು. ಸ್ವತಃ ಅವರೂ ಅವರ ಪೂರ್ವಿಕರ, ಅವರ ಪತ್ನಿಯರ ಹಾಗೂ ಅವರ ಸಂತತಿಗಳ ಪೈಕಿ ಸಜ್ಜನರಾಗಿರುವವರೂ ಅವುಗಳಲ್ಲಿ ಪ್ರವೇಶಿಸುವರು. ಎಲ್ಲಾ ದಿಕ್ಕುಗಳಿಂದಲೂ ದೇವಚರರು ಅವರನ್ನು ಸ್ವಾಗತಿಸಲು ಬರುವರು-

جَنّٰتُ عَدْنٍ يَّدْخُلُوْنَهَا وَمَنْ صَلَحَ
مِنْ أٰبَآئِهِمْ وَأَزْوَاجِهِمْ وَذُرِّيّٰتِهِمْ
وَالْمَلٰٓئِكَةُ يَدْخُلُوْنَ عَلَيْهِمْ مِّنْ كُلِّ بَابٍ ﴿٢٣﴾

24. ಮತ್ತು ಅವರೊಡನೆ, "ನಿಮಗೆ ರಕ್ಷಣೆ ಇರಲಿ, ನೀವು (ಭೂಲೋಕದಲ್ಲಿ) ಸಹನೆಯಿಂದ ವರ್ತಿಸಿದ್ದುದರ ಫಲವಾಗಿ ಇಂದು ಇದಕ್ಕೆ ಅರ್ಹರಾಗಿರುತ್ತೀರಿ" ಎಂದು ಹೇಳುವರು. ಪರಲೋಕ ಗೃಹವು ಅದೆಷ್ಟು ಉತ್ತಮ!

سَلٰمٌ عَلَيْكُمْ بِمَا صَبَرْتُمْ فَنِعْمَ عُقْبَى الدَّارِ ﴿٢٤﴾

25. ಅಲ್ಲಾಹನೊಂದಿಗೆ ಬಲವಾದ ಕರಾರನ್ನು ಮಾಡಿಕೊಂಡ ಬಳಿಕ ಮುರಿದುಬಿಡುವವರು, ಅಲ್ಲಾಹನು ಜೋಡಿಸಲು ಆಜ್ಞೆ

وَالَّذِيْنَ يَنْقُضُوْنَ عَهْدَ اللّٰهِ مِنْ بَعْدِ
مِيْثَاقِهٖ وَيَقْطَعُوْنَ مَآ أَمَرَ اللّٰهُ بِهٖٓ

ಕೊಟ್ಟಂತಹ ಸಂಬಂಧಗಳನ್ನು ಮುರಿಯುವವರು ಮತ್ತು ಭೂಮಿಯ ಮೇಲೆ ಗೊಂದಲ ಹಬ್ಬಿಸುತ್ತಿರುವವರು ಶಾಪಕ್ಕೆ ಅರ್ಹರು. ಅವರಿಗೆ ಪರಲೋಕದಲ್ಲಿ ಅತ್ಯಂತ ಕೆಟ್ಟ ನಿವಾಸವಿದೆ.

أَنْ يُّوْصَلَ وَيُفْسِدُوْنَ فِي الْأَرْضِ ۙ
أُولٰٓئِكَ لَهُمُ اللَّعْنَةُ وَلَهُمْ سُوْٓءُ الدَّارِ ﴿٢٥﴾

26. ಅಲ್ಲಾಹನು ತನಗಿಷ್ಟವಿದ್ದವರಿಗೆ ಜೀವನಾಧಾರವನ್ನು ವಿಪುಲಗೊಳಿಸುತ್ತಾನೆ ಮತ್ತು ತನಗಿಷ್ಟವಿದ್ದವರಿಗೆ ಪರಿಮಿತಗೊಳಿಸಿ ಕೊಡುತ್ತಾನೆ. ಇವರು ಇಹಜೀವನದಲ್ಲಿ ಮಗ್ನರಾಗಿದ್ದಾರೆ. ವಸ್ತುತಃ ಇಹಜೀವನವು ಪರಲೋಕ ಜೀವನದ ಮುಂದೆ ಅತಿ ಅಲ್ಪ ಸಾಧನವೇ ವಿನಾ ಬೇರೇನೂ ಅಲ್ಲ.

اَللّٰهُ يَبْسُطُ الرِّزْقَ لِمَنْ يَّشَآءُ وَيَقْدِرُ ۚ
وَفَرِحُوْا بِالْحَيٰوةِ الدُّنْيَا ۚ وَمَا الْحَيٰوةُ
الدُّنْيَا فِي الْاٰخِرَةِ اِلَّا مَتَاعٌ ﴿٢٦﴾

27. [ಮುಹಮ್ಮದ್‌ರ(ಸ) ಪ್ರವಾದಿತ್ವವನ್ನು] ನಿರಾಕರಿಸಿದವರು, "ಇವನ ಮೇಲೆ ಇವನ ಪ್ರಭುವಿನ ಕಡೆಯಿಂದ ಯಾವುದಾದರೊಂದು ನಿದರ್ಶನವೇಕೆ ಅವತೀರ್ಣಗೊಳ್ಳಲಿಲ್ಲ?" ಎಂದು ಕೇಳುತ್ತಾರೆ. ಹೇಳಿರಿ- "ಅಲ್ಲಾಹನು ನಿಶ್ಚಯವಾಗಿಯೂ ತನಗಿಷ್ಟ ಬಂದವರನ್ನು ಪಥಭ್ರಷ್ಟಗೊಳಿಸಿಬಿಡುತ್ತಾನೆ ಮತ್ತು ಅವನ ಕಡೆಗೆ ವಾಲುವವರಿಗೇ ತನ್ನ ಕಡೆಗೆ ಬರುವ ದಾರಿಯನ್ನು ತೋರಿಸುತ್ತಾನೆ."

وَيَقُوْلُ الَّذِيْنَ كَفَرُوْا لَوْلَآ اُنْزِلَ
عَلَيْهِ اٰيَةٌ مِّنْ رَّبِّهٖ ۗ قُلْ اِنَّ اللّٰهَ
يُضِلُّ مَنْ يَّشَآءُ وَيَهْدِيْٓ اِلَيْهِ مَنْ اَنَابَ ﴿٢٧﴾

28. ಇಂತಹವರೇ (ಈ ಪ್ರವಾದಿಯ ಆಹ್ವಾನವನ್ನು) ಸ್ವೀಕರಿಸಿದ್ದಾರೆ ಮತ್ತು ಅವರ ಹೃದಯಗಳಿಗೆ ಅಲ್ಲಾಹನ ಸ್ಮರಣೆಯಿಂದ ಶಾಂತಿಯೊದಗುತ್ತದೆ. ಕೇಳಿರಿ, ಮನಶ್ಶಾಂತಿಯೊದಗುವುದು ಅಲ್ಲಾಹನ ಸ್ಮರಣೆಯಿಂದಲೇ ಎಂಬುದು ಖಚಿತ.

اَلَّذِيْنَ اٰمَنُوْا وَتَطْمَئِنُّ قُلُوْبُهُمْ بِذِكْرِ
اللّٰهِ ۗ اَلَا بِذِكْرِ اللّٰهِ تَطْمَئِنُّ الْقُلُوْبُ ﴿٢٨﴾

29. ಸತ್ಯಾಹ್ವಾನವನ್ನು ಸ್ವೀಕರಿಸಿ ಸತ್ಕರ್ಮವೆಸಗಿದವರು ಅದೃಷ್ಟಶಾಲಿಗಳು. ಅವರಿಗೆ ಅತ್ಯುತ್ತಮ ಅಂತಿಮ ನೆಲೆ ಇದೆ.

اَلَّذِيْنَ اٰمَنُوْا وَعَمِلُوا الصّٰلِحٰتِ طُوْبٰى
لَهُمْ وَحُسْنُ مَاٰبٍ ﴿٢٩﴾

30. ಓ ಪೈಗಂಬರರೇ, ಅನೇಕ ಸಮುದಾಯಗಳು ಗತಿಸಿಹೋದ ಅನಂತರದ ಈ ಸಮುದಾಯಕ್ಕೆ ಈ ರೀತಿ ನಾವು ನಿಮ್ಮನ್ನು ರಸೂಲರಾಗಿ ಮಾಡಿ ಕಳುಹಿಸಿರುತ್ತೇವೆ,[10] ನಾವು ನಿಮಗೆ 'ದಿವ್ಯ ವಾಣಿ' ಮೂಲಕ ಅವತೀರ್ಣಗೊಳಿಸುತ್ತಿರುವ ಸಂದೇಶವನ್ನು ಇವರಿಗೆ ಓದಿ ಹೇಳಲಿಕ್ಕಾಗಿ. ಅವರು ಅತ್ಯಂತ ಕರುಣಾಮಯಿಯಾಗಿರುವಾತನನ್ನು ನಿಷೇಧಿಸುತ್ತಾರೆ. ಅವರೊಡನೆ ಹೇಳಿರಿ- "ಅವನೇ ನನ್ನ ಪಾಲಕ ಪ್ರಭು, ಅವನ ಹೊರತು ಆರಾಧ್ಯನಾರೂ ಇಲ್ಲ. ನಾನು ಅವನ ಮೇಲೆಯೇ ಭರವಸೆಯನ್ನಿರಿಸಿದೆ. ಅವನೇ ನನ್ನ ಆಶ್ರಯದಾತ."

كَذٰلِكَ اَرْسَلْنٰكَ فِيْٓ اُمَّةٍ قَدْ خَلَتْ مِنْ
قَبْلِهَآ اُمَمٌ لِّتَتْلُوَا۟ عَلَيْهِمُ الَّذِيْٓ اَوْحَيْنَآ
اِلَيْكَ وَهُمْ يَكْفُرُوْنَ بِالرَّحْمٰنِ ۚ
قُلْ هُوَ رَبِّيْ لَآ اِلٰهَ اِلَّا هُوَ ۚ عَلَيْهِ
تَوَكَّلْتُ وَاِلَيْهِ مَتَابِ ﴿٣٠﴾

10. ಅರ್ಥಾತ್- ಈ ಜನರು ಬಯಸುತ್ತಿರುವ ಯಾವುದೇ ರೀತಿಯ ದೃಷ್ಟಾಂತಗಳಿಲ್ಲದೆ.

31. ಪರ್ವತಗಳನ್ನು ಚಲಿಸುವಂತೆ ಅಥವಾ ಭೂಮಿಯನ್ನು ಸೀಳಿಬಿಡುವಂತೆ ಅಥವಾ ಮೃತರು ಸಮಾಧಿಯಿಂದ ಎದ್ದು ಮಾತಾಡುವಂತೆ ಮಾಡಿಬಿಡತಕ್ಕಂತಹ ಒಂದು ಕುರ್‌ಆನ್ ಅವತೀರ್ಣಗೊಳಿಸಲ್ಪಡುತ್ತಿದ್ದರೂ ಅವರು ನಂಬುತ್ತಿರಲಿಲ್ಲ (ಇಂತಹ ದೃಷ್ಟಾಂತಗಳನ್ನು ತೋರಿಸಿಬಿಡುವುದೇನೂ ಕಷ್ಟ ಸಾಧ್ಯವಲ್ಲ.) ನಿಜವಾಗಿ ಸಕಲ ಕಾರ್ಯಗಳ ಪರಮಾಧಿಕಾರ ಅಲ್ಲಾಹನ ಕೈಯಲ್ಲೇ ಇದೆ.[11] ಅಲ್ಲಾಹ್ ಇಚ್ಛಿಸುತ್ತಿದ್ದರೆ ಸಕಲ ಮಾನವರಿಗೂ ಸನ್ಮಾರ್ಗದರ್ಶನ ನೀಡಿಬಿಡುತ್ತಿದ್ದನೆಂದು[12] ತಿಳಿದು (ಸತ್ಯನಿಷೇಧಿಗಳ ಬೇಡಿಕೆಯ ಉತ್ತರವಾಗಿ ಯಾವುದಾದರೊಂದು ಕುರುಹು ತೋರಿ ಬರಬಹುದೆಂಬುದರ ಬಗ್ಗೆ ಇನ್ನೂ ಆಶೆ ಇಟ್ಟುಕೊಂಡಿರುವ) ಸತ್ಯವಿಶ್ವಾಸಿಗಳು ನಿರಾಶರಾಗಲಿಲ್ಲವೇ? ಸತ್ಯನಿಷೇಧಿಗಳ ದುಷ್ಕರ್ಮಗಳ ಕಾರಣದಿಂದ ಅವರ ಮೇಲೆ ಅಥವಾ ಅವರ ಮನೆಯ ಸಮೀಪವೆಲ್ಲಾದರೂ ಒಂದಲ್ಲೊಂದು ವಿಪತ್ತು ಎರಗುತ್ತಲೇ ಇರುತ್ತದೆ. ಇದು ಅಲ್ಲಾಹನ ವಾಗ್ದಾನ ಪೂರ್ತಿಗೊಳ್ಳುವವರೆಗೂ ನಿರಂತರವಾಗಿ ಮುಂದುವರಿಯುತ್ತಲೇ ಇರುವುದು. ನಿಶ್ಚಯವಾಗಿಯೂ ಅಲ್ಲಾಹನು ತನ್ನ ವಾಗ್ದಾನವನ್ನು ಉಲ್ಲಂಘಿಸುವುದಿಲ್ಲ.

وَلَوْ أَنَّ قُرْآنًا سُيِّرَتْ بِهِ الْجِبَالُ
أَوْ قُطِّعَتْ بِهِ الْأَرْضُ أَوْ كُلِّمَ بِهِ
الْمَوْتَىٰ ۗ بَل لِّلَّهِ الْأَمْرُ جَمِيعًا ۗ أَفَلَمْ
يَيْأَسِ الَّذِينَ آمَنُوا أَن لَّوْ يَشَاءُ اللَّهُ
لَهَدَى النَّاسَ جَمِيعًا ۗ وَلَا يَزَالُ الَّذِينَ
كَفَرُوا تُصِيبُهُم بِمَا صَنَعُوا قَارِعَةٌ أَوْ
تَحُلُّ قَرِيبًا مِّن دَارِهِمْ حَتَّىٰ يَأْتِيَ
وَعْدُ اللَّهِ ۚ إِنَّ اللَّهَ لَا يُخْلِفُ الْمِيعَادَ ﴿٣١﴾

32. ನಿಮಗಿಂತ ಮೊದಲೂ ಅನೇಕ ರಸೂಲರು ಅಪಹಾಸ್ಯಗೊಳಿಸಲ್ಪಟ್ಟಿದ್ದಾರೆ. ಆದರೆ ನಾನು ಸತ್ಯನಿಷೇಧಿಗಳನ್ನು ಯಾವಾಗಲೂ ಸಡಿಲು ಬಿಟ್ಟಿದ್ದೇನೆ ಮತ್ತು ಕೊನೆಗೆ ಅವರನ್ನು ಬಿಗಿ ಹಿಡಿದೆನು. ಅನಂತರ ನನ್ನ ಶಿಕ್ಷೆ ಎಷ್ಟು ಕಠಿಣವಿತ್ತೆಂದು ನೋಡಿಕೊಳ್ಳಿರಿ.

وَلَقَدِ اسْتُهْزِئَ بِرُسُلٍ مِّن قَبْلِكَ
فَأَمْلَيْتُ لِلَّذِينَ كَفَرُوا ثُمَّ أَخَذْتُهُمْ ۖ
فَكَيْفَ كَانَ عِقَابِ ﴿٣٢﴾

33. ಪ್ರತಿಯೊಬ್ಬನ ಗಳಿಕೆಯ ಮೇಲೆ ದೃಷ್ಟಿ ಇರಿಸಿರುವ ಅಲ್ಲಾಹನಿಗೆ ಜನರು ಕೆಲವು ಭಾಗೀದಾರರನ್ನು ನಿಶ್ಚಯಿಸಿಕೊಂಡಿರುವರೇ? ಅವನ ಬಗ್ಗೆ ಈ ಸಾಹಸವೇ? ಓ ಪೈಗಂಬರರೇ, ಅವರೊಡನೆ ಹೇಳಿರಿ- ಅವುಗಳು ನಿಜಕ್ಕೂ ಅಲ್ಲಾಹನೇ ನಿಶ್ಚಯಿಸಿಕೊಂಡಿರುವ ಸಹಭಾಗಿಗಳಾಗಿದ್ದರೆ ಅವರು ಯಾರು ಯಾರೆಂದು ಅವರ

أَفَمَنْ هُوَ قَائِمٌ عَلَىٰ كُلِّ نَفْسٍ بِمَا
كَسَبَتْ ۗ وَجَعَلُوا لِلَّهِ شُرَكَاءَ قُلْ سَمُّوهُمْ ۚ
أَمْ تُنَبِّئُونَهُ بِمَا لَا يَعْلَمُ فِي الْأَرْضِ

11. ಅರ್ಥಾತ್- ದೃಷ್ಟಾಂತಗಳನ್ನು ತೋರಿಸದಿರಲು ಕಾರಣ ಅಲ್ಲಾಹನು ಅದನ್ನು ತೋರಿಸಲು ಸಮರ್ಥನಲ್ಲ ಎಂಬುದಲ್ಲ. ಬದಲಾಗಿ ಈ ರೀತಿ ಕಾರ್ಯವೆಸಗುವುದು ಅಲ್ಲಾಹನ ಯುಕ್ತಿಗೆ ವಿರುದ್ಧವಾಗಿದೆ. ಏಕೆಂದರೆ ಪರಮೋದ್ದೇಶ ಸನ್ಮಾರ್ಗದರ್ಶನವಾಗಿದೆಯೇ ಹೊರತು ಪ್ರವಾದಿಯ ಪ್ರವಾದಿತ್ವವನ್ನು ನಂಬಿಸಿ ಬಿಡುವುದಲ್ಲ. ಇನ್ನು ಸನ್ಮಾರ್ಗದರ್ಶನವಾದರೋ ಜನರ ಚಿಂತನೆ ಮತ್ತು ಅಂತರ್‌ದೃಷ್ಟಿಯ ಸುಧಾರಣೆಯಾಗದೆ ಸಾಧ್ಯವಿಲ್ಲ.

12. ಅರ್ಥಾತ್- ತಿಳುವಳಿಕೆಯಿಲ್ಲದ ಮತ್ತು ಪ್ರಜ್ಞಾಪೂರ್ವಕವಲ್ಲದ ಸತ್ಯವಿಶ್ವಾಸವೇ ಉದ್ದೇಶವಾಗಿದ್ದರೆ ದೃಷ್ಟಾಂತಗಳನ್ನು ತೋರಿಸುವ ಗೊಡವೆಗೆ ಹೋಗುವ ಆವಶ್ಯಕತೆ ಮತ್ತು ಅಲ್ಲಾಹನು ಎಲ್ಲರನ್ನೂ ಸತ್ಯವಿಶ್ವಾಸಿಗಳಾಗಿಯೇ ಸೃಷ್ಟಿಸುವ ಮೂಲಕವೂ ಈ ಕೆಲಸವನ್ನು ಸಾಧಿಸಬಹುದಾಗಿತ್ತು.

ಹೆಸರೆತ್ತಿ ಹೇಳಿ ನೋಡೋಣ. ಅಲ್ಲಾಹನು ತನ್ನ ಭೂಮಿಯಲ್ಲಿ ತಿಳಿದಿರದಂತಹ ಒಂದು ಹೊಸ ವಿಷಯವನ್ನು ನೀವು ಅವನಿಗೆ ತಿಳಿಸುತ್ತೀರಾ? ಅಥವಾ ನೀವು ಸುಮ್ಮನೆ ಬಾಯಿಗೆ ಬಂದುದನ್ನು ಹೇಳಿಬಿಡುತ್ತೀರಾ? ವಾಸ್ತವದಲ್ಲಿ ಸತ್ಯಾಹ್ವಾನವನ್ನು ನಿರಾಕರಿಸಿದ ವರಿಗೆ ಅವರ ಕುತಂತ್ರಗಳು[13] ಮನೋಹರ ವಾಗಿಸಲ್ಪಟ್ಟಿವೆ ಮತ್ತು ಅವರು ಸನ್ಮಾರ್ಗದಿಂದ ತಡೆಯಲ್ಪಟ್ಟಿರುತ್ತಾರೆ. ಯಾರನ್ನು ಅಲ್ಲಾಹನು ಪಥಭ್ರಷ್ಟತೆಯಲ್ಲಿ ಹಾಕಿಬಿಡುತ್ತಾನೋ ಅವನಿಗಾರೂ ಮಾರ್ಗದರ್ಶಕನಿಲ್ಲ.

اَمْ بِظَاهِرٍ مِّنَ الْقَوْلِ ؕ بَلْ زُيِّنَ لِلَّذِيْنَ
كَفَرُوْا مَكْرُهُمْ وَصُدُّوْا عَنِ السَّبِيْلِ ؕ وَ
مَنْ يُّضْلِلِ اللّٰهُ فَمَا لَهٗ مِنْ هَادٍ ۝٣٣

34. ಇಂತಹವರಿಗೆ ಇಹಜೀವನದಲ್ಲೇ ಶಿಕ್ಷೆ ಇದೆ ಮತ್ತು ಪರಲೋಕದ ಶಿಕ್ಷೆ ಇದಕ್ಕಿಂತಲೂ ಕಠಿಣವಾಗಿದೆ. ಅವರನ್ನು ಅಲ್ಲಾಹನಿಂದ ರಕ್ಷಿಸುವವರು ಯಾರೂ ಇಲ್ಲ.

لَهُمْ عَذَابٌ فِى الْحَيٰوةِ الدُّنْيَا وَلَعَذَابُ
الْاٰخِرَةِ اَشَقُّ ۚ وَمَا لَهُمْ مِّنَ اللّٰهِ مِنْ وَّاقٍ ۝٣٤

35. ದೇವಭಯವಿರಿಸಿಕೊಂಡವರಿಗೆ ವಾಗ್ದಾನ ಮಾಡಲಾಗಿರುವ ಸ್ವರ್ಗದ ತಳಭಾಗದಲ್ಲಿ ಕಾಲುವೆಗಳು ಹರಿಯುತ್ತಿವೆ. ಅದರ ಫಲಗಳಿಗೂ ನೆರಳಿಗೂ ಅಳಿವಿಲ್ಲ. ದೇವಭಯವುಳ್ಳವರ ಅಂತಿಮ ಪರಿಣಾಮ ವಿದು ಮತ್ತು ಸತ್ಯನಿಷೇಧಿಗಳ ಅಂತಿಮ ಪರಿಣಾಮವು ನರ ಕಾಗ್ನಿಯೇ ಆಗಿದೆ.

مَثَلُ الْجَنَّةِ الَّتِىْ وُعِدَ الْمُتَّقُوْنَ ؕ تَجْرِىْ
مِنْ تَحْتِهَا الْاَنْهٰرُ ؕ اُكُلُهَا دَآئِمٌ
وَّ ظِلُّهَا ؕ تِلْكَ عُقْبَى الَّذِيْنَ اتَّقَوْا ۖ
وَّ عُقْبَى الْكٰفِرِيْنَ النَّارُ ۝٣٥

36. ಓ ಪೈಗಂಬರರೇ, ನಾವು ಹಿಂದೆ ಯಾರಿಗೆ ಗ್ರಂಥ ದಯ ಪಾಲಿಸಿದ್ದೆವೋ ಅವರು ನಿಮಗೆ ನಾವು ಅವತೀರ್ಣಗೊಳಿಸಿರುವ ಈ ಗ್ರಂಥದಿಂದ ಸಂತುಷ್ಟರಾಗಿದ್ದಾರೆ. ವಿವಿಧ ಪಂಗಡಗಳಲ್ಲಿ ಕೆಲವರು ಇದರ ಕೆಲವು ವಿಷಯಗಳನ್ನು ಒಪ್ಪದವರೂ ಇದ್ದಾರೆ. ನೀವು ಸ್ಪಷ್ಟವಾಗಿ (ಹೀಗೆ) ಹೇಳಿಬಿಡಿರಿ- "ನನಗೆ ಕೇವಲ ಅಲ್ಲಾಹನ ದಾಸ್ಯ-ಆರಾಧನೆಯ ಆಜ್ಞೆ ನೀಡಲಾಗಿದೆ. ಅವನೊಂದಿಗೆ ಇತರರನ್ನು ಸಹಭಾಗಿಗಳನ್ನಾಗಿಸುವುದನ್ನು ನಿಷೇಧಿಸಲಾಗಿದೆ. ಆದುದರಿಂದ ನಾನು ಅವನ ಕಡೆಗೇ ಕರೆ ನೀಡುತ್ತೇನೆ ಮತ್ತು ನನ್ನ ಮರಳುವಿಕೆಯೂ ಆತನ ಕಡೆಗೇ ಇದೆ."

وَ الَّذِيْنَ اٰتَيْنٰهُمُ الْكِتٰبَ يَفْرَحُوْنَ بِمَآ
اُنْزِلَ اِلَيْكَ وَمِنَ الْاَحْزَابِ مَنْ يُّنْكِرُ
بَعْضَهٗ ؕ قُلْ اِنَّمَآ اُمِرْتُ اَنْ اَعْبُدَ اللّٰهَ
وَلَآ اُشْرِكَ بِهٖ ؕ اِلَيْهِ اَدْعُوْا وَاِلَيْهِ مَاٰبِ ۝٣٦

13. ಬಹುದೇವಾರಾಧನೆಯನ್ನು ಇಲ್ಲಿ ಕುತಂತ್ರವೆನ್ನಲಾಗಿದೆ. ಏಕೆಂದರೆ ಯಾವ ನಕ್ಷತ್ರ, ಉಪಗ್ರಹ, ದೇವಚರರು, ಆತ್ಮಗಳು ಅಥವಾ ಹಿರಿಯ ವ್ಯಕ್ತಿಗಳನ್ನು ಇವರು ದೇವತ್ವದ ಅಧಿಕಾರವನ್ನು ಹೊಂದಿರುವವರೆಂದು ಹೇಳುತ್ತಿದ್ದಾರೋ, ಯಾರನ್ನು ಇವರು ದೇವನ ವಿಶಿಷ್ಟ ಹಕ್ಕುಗಳಲ್ಲಿ ಭಾಗಿದಾರರನ್ನಾಗಿ ಮಾಡಿದ್ದಾರೋ ಅವರ ಪೈಕಿ ಯಾರೂ ಅಂತಹ ಅಧಿಕಾರ ಅಥವಾ ಗುಣಗಳನ್ನು ಹೊಂದಿರುವ ಬಗ್ಗೆ ಪ್ರತಿಪಾದಿಸಿರಲಿಲ್ಲ. ಅಂತಹ ಹಕ್ಕುಗಳನ್ನು ಅಪೇಕ್ಷಿಸಿರಲೂ ಇಲ್ಲ. ನಮ್ಮ ಮುಂದೆ ಪೂಜಾ ಕರ್ಮಗಳನ್ನು ಕೈಗೊಂಡರೆ ನಾವು ನಿಮ್ಮ ಕೆಲಸ ಈಡೇರಿಸಿ ಕೊಡುತ್ತೇವೆ ಎಂದು ಹೇಳಿರಲೂ ಇಲ್ಲ. ಇದು ಕೆಲವು ಚಾಣಾಕ್ಷಮತಿಗಳ ಕೆಲಸವಾಗಿದೆ. ಅವರು ಜನಸಾಮಾನ್ಯರಲ್ಲಿ ತಮ್ಮ ದೇವತ್ವದ ಛಾಪು ಒತ್ತಲಿಕ್ಕಾಗಿ ಮತ್ತು ಅವರ ಸಂಪಾದನೆಯಿಂದ ಪಾಲು ಪಡೆಯಲಿಕ್ಕಾಗಿ ಕೆಲವು ಕೃತಕ ದೇವರುಗಳನ್ನು ಸೃಷ್ಟಿಸಿದರು. ಜನರನ್ನು ಅವರ ಶ್ರದ್ಧಾಳುಗಳನ್ನಾಗಿ ಮಾಡಿದರು. ತಮ್ಮನ್ನು ಯಾವುದಾದರೊಂದು ರೂಪದಲ್ಲಿ ಪ್ರತಿನಿಧಿಗಳನ್ನಾಗಿ ಮಾಡಿಕೊಂಡು ಸ್ವಾರ್ಥ ಸಾಧನೆ ಮಾಡಲು ಅವರು ಪ್ರಯತ್ನಿಸಿದರು.

وَكَذٰلِكَ اَنْزَلْنٰهُ حُكْمًا عَرَبِيًّا ؕ وَلَئِنِ
اتَّبَعْتَ اَهْوَآءَهُمْ بَعْدَ مَا جَآءَكَ مِنَ الْعِلْمِ ۙ
مَا لَكَ مِنَ اللّٰهِ مِنْ وَّلِيٍّ وَّلَا وَاقٍ ٣٧ ع

37. ನಾವು ಈ ಅರಬಿ (ಭಾಷೆಯ) ಆದೇಶವನ್ನು ಈ ನಿರ್ದೇಶನದೊಂದಿಗೆ ನಿಮಗೆ ಅವತೀರ್ಣಗೊಳಿಸಿರುತ್ತೇವೆ. ನಿಮಗೆ ಬಂದಿರುವ ಈ ಜ್ಞಾನದ ಬಳಿಕವೂ ನೀವು ಜನರ ಅಭಿಲಾಷೆಗಳನ್ನನುಸರಿಸಿದರೆ, ಅಲ್ಲಾಹನ ಎದುರು ನಿಮಗೆ ಬೆಂಬಲಿಗರಾಗಲಿ ನಿಮ್ಮನ್ನು ಅವನ ಹಿಡಿತದಿಂದ ರಕ್ಷಿಸುವವರಾಗಲಿ ಯಾರೂ ಇರಲಾರರು.

وَلَقَدْ اَرْسَلْنَا رُسُلًا مِّنْ قَبْلِكَ وَجَعَلْنَا
لَهُمْ اَزْوَاجًا وَّذُرِّيَّةً ؕ وَمَا كَانَ لِرَسُوْلٍ
اَنْ يَّاْتِيَ بِاٰيَةٍ اِلَّا بِاِذْنِ اللّٰهِ ؕ لِكُلِّ
اَجَلٍ كِتَابٌ ٣٨

38. ನಾವು ನಿಮಗಿಂತ ಮುಂಚೆಯೂ ಅನೇಕ ಸಂದೇಶವಾಹಕರನ್ನು ಕಳುಹಿಸಿದ್ದೇವು ಮತ್ತು ನಾವು ಅವರಿಗೆ ಪತ್ನಿಯರನ್ನೂ ಮಕ್ಕಳನ್ನೂ ನೀಡಿದ್ದೇವು.[14] ಯಾವ ಸಂದೇಶವಾಹಕನಿಗೂ ಅಲ್ಲಾಹನ ಅನುಮತಿಯಿಲ್ಲದೆ ಯಾವತ್ತು ನಿದರ್ಶನವನ್ನು, ತಾನೇ ತಂದು ತೋರಿಸುವ ಸಾಮರ್ಥ್ಯವಿರಲಿಲ್ಲ. ಪ್ರತಿಯೊಂದು ಯುಗಕ್ಕೂ ಒಂದು ಗ್ರಂಥವಿದೆ.

يَمْحُوا اللّٰهُ مَا يَشَآءُ وَيُثْبِتُ ۖۚ وَعِنْدَهٗۤ
اُمُّ الْكِتٰبِ ٣٩

39. ಅಲ್ಲಾಹನು ತನಗಿಷ್ಟ ಬಂದುದನ್ನು ಅಳಿಸಿಬಿಡುತ್ತಾನೆ ಮತ್ತು ತನಗಿಷ್ಟವಿದ್ದುದನ್ನು ಉಳಿಸುತ್ತಾನೆ. 'ಉಮ್ಮುಲ್‌ಕಿತಾಬ್' (ಮಾತೃ ಗ್ರಂಥ)[15] ಅವನ ಬಳಿಯಲ್ಲೇ ಇದೆ.

وَاِنْ مَّا نُرِيَنَّكَ بَعْضَ الَّذِيْ نَعِدُهُمْ اَوْ
نَتَوَفَّيَنَّكَ فَاِنَّمَا عَلَيْكَ الْبَلٰغُ وَعَلَيْنَا
الْحِسَابُ ٤٠

40. ಓ ಪೈಗಂಬರರೇ, ನಾವು ಇವರಿಗೆ ಕೊಡುತ್ತಿರುವ ದುಷ್ಪರಿಣಾಮದ ಬೆದರಿಕೆಯ ಒಂದಂಶವನ್ನು ನಾವು ನಿಮ್ಮ ಜೀವಮಾನದಲ್ಲೇ ತೋರಿಸಿದರೂ ಅಥವಾ ಅದು ಪ್ರಕಟವಾಗುವುದಕ್ಕೆ ಮುಂಚೆ ನಿಮ್ಮನ್ನು ಎತ್ತಿಕೊಂಡರೂ ಹೇಗಿದ್ದರೂ ಸಂದೇಶವನ್ನು ಮುಟ್ಟಿಸುವುದು ನಿಮ್ಮ ಕೆಲಸ ಮತ್ತು ಲೆಕ್ಕಾಚಾರ ಪಡೆಯುವುದು ನಮ್ಮ ಕೆಲಸ.

اَوَلَمْ يَرَوْا اَنَّا نَاْتِي الْاَرْضَ نَنْقُصُهَا
مِنْ اَطْرَافِهَا ؕ وَاللّٰهُ يَحْكُمُ لَا مُعَقِّبَ
لِحُكْمِهٖ ؕ وَهُوَ سَرِيْعُ الْحِسَابِ ٤١

41. ನಾವು ಈ ಭೂಭಾಗದಲ್ಲಿ ಮುಂದೊತ್ತಿ ಬರುತ್ತಿರುವುದನ್ನೂ ಇದರ ಪರಿಧಿಯನ್ನು ಎಲ್ಲ ದಿಕ್ಕುಗಳಿಂದಲೂ ಮುದುಡಿಸುತ್ತ ಬರುತ್ತಿರುವುದನ್ನೂ ಇವರು ನೋಡುತ್ತಿಲ್ಲವೇ?[16] ಅಲ್ಲಾಹನು ಅಧಿಕಾರ ನಡೆಸುತ್ತಾನೆ. ಅವನ ತೀರ್ಮಾನವನ್ನು ಪುನರ್ವಿಮರ್ಶಿಸತಕ್ಕವನು ಯಾರೂ ಇಲ್ಲ ಮತ್ತು ಅವನಿಗೆ ಲೆಕ್ಕಾಚಾರ ಪಡೆಯುವುದರಲ್ಲಿ ಸ್ವಲ್ಪವೂ ವಿಳಂಬವಾಗುವುದಿಲ್ಲ.

14. ಇದು ಪ್ರವಾದಿವರ್ಯರ(ಸ) ಮೇಲೆ ಮಾಡಲಾಗುತ್ತಿದ್ದ ಆಕ್ಷೇಪವೊಂದಕ್ಕೆ ಉತ್ತರವಾಗಿದೆ. ಹೆಂಡತಿ ಮಕ್ಕಳನ್ನು ಹೊಂದಿರುವ ಇವರೆಂತಹ ಪ್ರವಾದಿ! ಪ್ರವಾದಿಗೂ ಮನಃಸೇಚ್ಛೆಗಳಿಗೂ ಎಲ್ಲಿಯ ಸಂಬಂಧ? ಎಂದು ಅವರು ಹೇಳುತ್ತಿದ್ದರು. ಅದೇ ವೇಳೆ ನಾವು ಪ್ರವಾದಿಗಳಾದ ಇಬ್‌ರಾಹೀಮ್ ಮತ್ತು ಇಸ್ಮಾಈಲ್‌ರ(ಅ) ಸಂತತಿಯಾಗಿರುವುದರ ಬಗ್ಗೆ ಅವರು ಹೆಮ್ಮೆ ಪಡುತ್ತಿದ್ದರು.

15. 'ಉಮ್ಮುಲ್ ಕಿತಾಬ್' ಎಂದರೆ ಮೂಲ ಗ್ರಂಥವೆಂದಾಗಿದೆ. ಅರ್ಥಾತ್ ಎಲ್ಲಾ ದಿವ್ಯಗ್ರಂಥಗಳು ಹೊರಟಿರುವ ಚಿಲುಮೆ ಅಥವಾ ಉಗಮ ಕೇಂದ್ರ.

42. ಇವರಿಗಿಂತ ಮುಂಚೆ ಗತಿಸಿದವರೂ ಮಹಾ ಮಹಾ ಕುತಂತ್ರಗಳನ್ನು ಹೂಡಿದ್ದರು. ಆದರೆ ನಿರ್ಣಾಯಕವಾದ ತಂತ್ರವು ಸರ್ವಸಂಪೂರ್ಣವಾಗಿ ಅಲ್ಲಾಹನ ಕೈಯಲ್ಲೇ ಇದೆ. ಯಾರು ಏನನ್ನು ಸಂಪಾದಿಸುತ್ತಿರುವನೆಂಬುದು ಅವನಿಗೆ ಗೊತ್ತಿದೆ. ಯಾರ ಪರ್ಯವಸಾನವು ಶುಭಕರವಾಗುವುದೆಂದು ಈ ಸತ್ಯನಿಷೇಧಿಗಳು ಶೀಘ್ರವೇ ತಿಳಿಯುವರು.

وَقَدْ مَكَرَ الَّذِيْنَ مِنْ قَبْلِهِمْ فَلِلّٰهِ
الْمَكْرُ جَمِيْعًا ۭ يَعْلَمُ مَا تَكْسِبُ كُلُّ
نَفْسٍ ۭ وَسَيَعْلَمُ الْكُفّٰرُ لِمَنْ عُقْبَى الدَّارِ ﴿٤٢﴾

43. ನೀವು ದೇವಸಂದೇಶವಾಹಕರಲ್ಲವೆಂದು ಈ ಸತ್ಯನಿಷೇಧಿಗಳು ಹೇಳುತ್ತಾರೆ. ಹೇಳಿರಿ- "ನನ್ನ ಮತ್ತು ನಿಮ್ಮ ನಡುವೆ ಅಲ್ಲಾಹನ ಸಾಕ್ಷ್ಯವೇ ಸಾಕು ಮತ್ತು ದಿವ್ಯ ಗ್ರಂಥದ ಜ್ಞಾನವುಳ್ಳವನ ಸಾಕ್ಷ್ಯ ಸಾಕು."

وَيَقُوْلُ الَّذِيْنَ كَفَرُوْا لَسْتَ مُرْسَلًا ۭ قُلْ
كَفٰى بِاللّٰهِ شَهِيْدًۢا بَيْنِيْ وَبَيْنَكُمْ ۙ
وَمَنْ عِنْدَهٗ عِلْمُ الْكِتٰبِ ﴿٤٣﴾ ع ٦ ٦ ١٢

---

16. ಅರ್ಥಾತ್- ಇಸ್ಲಾಮಿನ ಪ್ರಭಾವ ಅರಬ್ ಸಾಮ್ರಾಜ್ಯದ ಮೂಲೆಮೂಲೆಗೆ ಹರಡುತ್ತಾ ಹೋಗುತ್ತಿರುವುದು ನಿಮ್ಮ ವಿರೋಧಿಗಳಿಗೆ ಕಾಣುತ್ತಿಲ್ಲವೇ. ನಾಲ್ಕೂ ನಿಟ್ಟಿನಿಂದ ಅವರ ವಲಯ ಕುಂಟಿತವಾಗುತ್ತಾ ಹೋಗುತ್ತಿದೆ. ಇದು ಅವರ ವಿನಾಶದ ಲಕ್ಷಣವಲ್ಲದಿದ್ದರೆ ಮತ್ತೇನು? "ನಾವು ಈ ಭೂಭಾಗದಲ್ಲಿ ಮುಂದೊತ್ತಿ ಬರುತ್ತಿದ್ದೇವೆ" ಎಂಬ ಅಲ್ಲಾಹನ ಮಾತು ಒಂದು ಸೊಗಸಾದ ಧಾಟಿಯಾಗಿದೆ. ಸತ್ಯಾಹ್ವಾನ ವಾಸ್ತವದಲ್ಲಿ ಅಲ್ಲಾಹನ ಕಡೆಯಿಂದಾಗಿರುತ್ತದೆ. ಅಲ್ಲಾಹನು ಸತ್ಯದೆಡೆಗೆ ಆಹ್ವಾನಿಸುವವರ ಜತೆಗಿರುತ್ತಾನೆ. ಆದ್ದರಿಂದಲೇ ಯಾವುದಾದರೂ ಭೂಭಾಗದಲ್ಲಿ ಈ ಸಂದೇಶ ಪ್ರಚಾರಗೊಳ್ಳುತ್ತಿರುವುದನ್ನು ಅಲ್ಲಾಹನು, "ನಾವು ಈ ಭೂಭಾಗದಲ್ಲಿ ಮುಂದೊತ್ತಿ ಬರುತ್ತಿದ್ದೇವೆ" ಎಂದು ವಿವರಿಸುತ್ತಾನೆ.